ಚುನಾವಣೆಯ ದಿನ ಬೆಳಿಗ್ಗೆ, ಐದು ವರ್ಷಗಳಿಗೊಮ್ಮೆ ಜನ ತಮ್ಮ ಶಕ್ತಿ ಚಲಾಯಿಸುವ ದಿನ. ಮನೆ ಮರದ ಕೊಂಬೆ, ಟೆಲಿಫೋನ್ ಕಂಬಗಳ ಮೇಲೆ ಮಳೆಗಾಳಿಯ ಹೊಡೆತಕ್ಕೆ ಜರ್ಜರಿತವಾದ, ಹರಿದ ಫಲಕಗಳು **POP** ಮತ್ತು **PAP** ಅಭ್ಯರ್ಥಿಗಳ ಪರ ಮತಚಲಾಯಿಸುವಂತೆ ಯಾಚಿಸುವ ಸಂದೇಶಗಳನ್ನು ಸಾರುತ್ತಿವೆ. ಚುನಾವಣಾ ಆಯೋಗ ವಿಧಿಸಿದ ಮತಕೇಂದ್ರದ ನಿಗದಿತ ದೂರದ ಪಕ್ಕದಲ್ಲಿಯೇ ಮಾರ್ಕೊಸ್ ಅದ್ದೂರಿಯಾದ ತನ್ನ ಕಾರಿನಲ್ಲಿ ಕುಳಿತಿದ್ದಾನೆ. ಚಲಿಸುವ ಬ್ಯಾಂಡಿನ ಸಂಗೀತಕ್ಕೆ ಅನುಗುಣವಾಗಿ ಹಳ್ಳಿಗರು ತಮ್ಮ ಕೈಯಲ್ಲಿ ಮತಪತ್ರಗಳನ್ನು ಹಿಡಿದು ನರ್ತಿಸುತ್ತಿದ್ದಾರೆ. ವಿಶಾಲವಾದ ತನ್ನ ಕಾರಿನ ಮೂಲೆಯಲ್ಲಿ ಕುಳಿತು ಮುಗುಳ್ನಗುತ್ತಾ ತಲೆ ಆಡಿಸುತ್ತಿದ್ದಾನೆ. ಅತಿಉತ್ಸಾಹದಲ್ಲಿದ್ದ ಒಬ್ಬಾತ ಕಾರಿನ ಬಳಿ ಬಂದು ಕೈ ಹಿಡಿದು, 'ಕಂಗ್ರಾಟ್ಸ್' ಎಂದ. ಇದು ಇತರರಿಗೆ ಮಾದರಿಯಾಗಿ ಅಭಿಮಾನಿಗಳು ಮಾರ್ಕೊಸ್ ಕೈಹಿಡಿದು 'ಕಂಗ್ರಾಟ್ಸ್' ಎನ್ನತೊಡಗಿದರು.

ರೂಫ್ ಮತ್ತು ಇತರೆ ಸಂಘಟಕರು ಬೆವರು ಸುರಿಸುತ್ತ ಅತ್ತಿಂದಿತ್ತ ಓಡಾಡುತ್ತಾ ಮತದಾರರಿಗೆ ಕೊನೆಯ ಗಳಿಗೆಯ ಸೂಚನೆ ನೀಡುತ್ತಿದ್ದಾರೆ.

'ಮರೆಯಬೇಡಿ' ಅವಿದ್ಯಾವಂತ ಹೆಣ್ಣು ಮಕ್ಕಳ ಗುಂಪಿನ ಬಳಿ ಹೋಗಿ ನುಡಿದ: 'ನಮ್ಮ ಗುರುತು ಮೋಟಾರ್ ಕಾರು. ಮಾರ್ಕೊಸ್ ಕುಳಿತಿರುವ ಕಾರಿನಂತದ್ದು. ಕಾರಿನ ಗುರುತನ್ನು ಹೊಂದಿದ ಬಾಕ್ಸ್ ನಿನ್ನದು. ಮನುಷ್ಯನ ತಲೆಯಿರುವ ಬಾಕ್ಸ್‌ನ ಕಡೆ ತಿರುಗಿಯೂ ನೋಡಬೇಡ. ಅದು ತಲೆ ಸರಿಯಿಲ್ಲದವರಿಗೆ' ಅವನ ಮಾತಿಗೆ ಹೆಂಗಳೆಯರು ಘೊಳ್ಳೆಂದರು. ಒಡನೆ ತನ್ನೆಡೆಗೆ ತಿರುಗಿದ ರೂಫ್‌ನೆಡೆಗೆ ಮಾರ್ಕೊಸ್ ಮೆಚ್ಚುಗೆಯ ಮುಗುಳ್ನಕ್ಕ.

'ಕಾರಿಗೆ ನಿಮ್ಮ ಮತ' ಗಂಟಲನಾಳಗಳು ಎದ್ದು ಕಾಣುವಂತೆ ಕೂಗಿದ: 'ಕಾರಿಗೆ ಮತ ನೀಡಿ ಮುಂದೆ ನೀವೂ ಅದನ್ನು ಚಲಾಯಿಸಬಹುದು.'

'ನಮಗಾಗದಿದ್ದರೂ ನಮ್ಮ ಮಕ್ಕಳಿಗಾದರೂ ಸರಿ' ಹೆಂಗಳೆಯರಿಂದ ಬಂತು ಉತ್ತರ.

ಬ್ಯಾಂಡ್ ಸೆಟ್‌ನ ಹಾಡುಗಾರ ಹೊಸ ಹಾಡು ಹಾಡತೊಡಗಿದ– 'ನೀನೆ ಕಾರು ಚಲಾಯಿಸುವಾಗ ನಡೆಯುವೆ ಏಕೆ?' ಮಾರ್ಕೊಸ್ ಮೇಲ್ನೋಟಕ್ಕೆ ಶಾಂತ, ದೃಢತೆಯ ಮೊಗದಾರಿಯಾಗಿದ್ದಾನೆ. ಪತ್ರಿಕೆಗಳು 'ಅಭೂತಪೂರ್ವ ವಿಜಯ'ವೆಂದು ಬರೆಯುವುದು ಖಚಿತವಾದರೂ ಒಂದೇ ಒಂದು ಮತ ವ್ಯರ್ಥವಾಗಲು ಬಿಡಲಾರ.

ಮಾರ್ಕೊಸ್ ತಮ್ಮ ಪ್ರಚಾರದ ಹುಡುಗರೊಬ್ಬರು ಮತ ಚಲಾಯಿಸಿ ಬರಲು ತಿಳಿಸಿದ.

'ರೂಫ್ ನೀನೆ ಮೊದಲು ಹೋಗುವುದು ಒಳ್ಳೆಯದು.' ರೂಫ್‌ನ ಚೈತನ್ಯ ಉಡುಗಿತು. ಬೆಳಗಿನಿಂದಲೂ ಮೇಲ್ನೋಟಕ್ಕೆ ತನ್ನ ದುಗುಡವನ್ನು ತೋರಿಸಿಕೊಳ್ಳದಿದ್ದ ಆತ ಮತಕೇಂದ್ರದ ಬಳಿ ನೆಗೆಯುತ್ತಾ ಹೋದ. ಮತಕೇಂದ್ರದ ಬಳಿಯಲ್ಲಿದ್ದ ಪೊಲೀಸಿನವ ಅವನಲ್ಲಿ ನಕಲಿ ಮತಪತ್ರವಿಲ್ಲವೆಂದು ಖಚಿತಪಡಿಸಿಕೊಂಡು ಒಳಬಿಟ್ಟ. ಚುನಾವಣಾಧಿಕಾರಿ ಅಲ್ಲಿಟ್ಟ ಎರಡು ಬಾಕ್ಸ್‌ಗಳ ಬಗ್ಗೆ ವಿವರಿಸಿದ. ಜಿಗಿಯುತ್ತಾ ಬಂದವ ಈಗ ಕಾಲೆಳೆಯುತ್ತಾ ಒಳಸಾಗಿದ. ಕಾರು ಮತ್ತು ತಲೆಯ ಚಿಹ್ನೆ ಇರುವ ಬಾಕ್ಸ್‌ಗೆ ಎದುರಾದ.

ಜೇಬಿನಿಂದ ಮತಪತ್ರ ಹೊರತೆಗೆದ 'ರಹಸ್ಯದಲ್ಲಾದರೂ ಮಾರ್ಕೊಸ್‌ಗೆ ದ್ರೋಹ ಬಗೆಯುವುದು ಹೇಗೆ? ಹಿಂತಿರುಗಿ ಹೋಗಿ ಐದು ಪೌಂಡ್ ನೋಟನ್ನು ಹಿಂತಿರುಗಿಸಲೇ? ಐದು ಪೌಂಡ್! ಐದು ಪೌಂಡ್!' ಅದು ಅಸಾಧ್ಯವೆಂದು ಅವನಿಗೆ ತಿಳಿದಿತ್ತು. ಅಮ್ಮನ ಮೇಲೆ ಆಣೆ ಬೇರೆ ಮಾಡಿದ್ದ. ಕೋಕೊ ವ್ಯವಸಾಯದಲ್ಲಿ ತೊಡಗಿಸಿಕೊಂಡ ರೈತನ ಚಿತ್ರದ ಕೆಂಪುನೋಟು.